# ನಗರಸಭಾ ಕಾರ್ಯಾಲಯ, ಮಂಡ್ಯ.

**ಸಂಖ್ಯೆ:ನಸಮಂ/ಸಭೆ ಸಂಖ್ಯೆ/19/2006–07** **ದಿನಾಂಕ:18–7–2006.**

**–: ಸಾಮಾನ್ಯ ಸಭೆ :–**

ದಿನಾಂಕ: 18–7–2006ರಂದು ಮಂಗಳವಾರ ಬೆಳಿಗ್ಗೆ 10–30 ಗಂಟೆಗೆ ಸರಿಯಾಗಿ ಮಂಡ್ಯ ನಗರಸಭಾ ಕಾರ್ಯಾಲಯದ ಶ್ರೀ ಧರಣಪ್ಪ ಸಭಾಂಗಣದಲ್ಲಿ ಮಾನ್ಯ ನಗರಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆಸಲಾದ ನಗರಸಭಾ ಸಾಮಾನ್ಯ ಅಧಿವೇಶನದ ನಡವಳಿಕೆಗಳು.

**ಹಾಜರಿ:** 28 **ಗೈರುಹಾಜರಿ:** 6+4 **ಖಾಲಿ:**1 **ರಜೆ:**ಇಲ್ಲ **ಒಟ್ಟು:**35

ಸಭೆಯ ಪ್ರಾರಂಭಕ್ಕೆ ಮುನ್ನ ದಿನಾಂಕ:13–7–2006ರಂದು ನಿಧನರಾದ ಮಾಜಿ ನಗರಸಭಾ ಸದಸ್ಯರಾದ ಶ್ರೀ.ಬಿ.ಟಿ.ತಿಮ್ಮಯ್ಯ ರವರಿಗೆ ಸಭೆಯು 2 ನಿಮಿಷ ಎದ್ದು ನಿಂತು ಮೌನ ಆಚರಿಸಿ ಶ್ರದ್ಧಾಂಜಲಿ ಅರ್ಪಿಸಲಾಯಿತು. ಮೃತರ ಗೌರವಾರ್ಥ ಶ್ರೀ.ಬಿ.ಟಿ.ತಿಮ್ಮಯ್ಯರವರ ಮನೆ ರಸ್ತೆಗೆ ಇವರ ಹೆಸರನ್ನು ನಾಮಕರಣ ಮಾಡುವಂತೆ ಮಾನ್ಯ ಸದಸ್ಯರಾದ ಶ್ರೀ.ಹೆಚ್.ಸಿ.ಬೋರೇಗೌಡರವರು ಕೋರಿದರು.

**ವಿಷಯ:1:–** ಹಿಂದಿನ ಸಭೆ ನಡವಳಿಕೆಗಳನ್ನು ಓದಿ ರೆಕಾರ್ಡು ಮಾಡುವ ವಿಚಾರ .

**ತೀರ್ಮಾನ:1:–** ಹಿಂದಿನ ಸಭೆ ನಡವಳಿಕೆಗಳನ್ನು ಓದಿ ರೆಕಾರ್ಡು ಮಾಡಲಾಯಿತು.

ಶೇಕಡ 18ರ ಲೆಕ್ಕ ಶೀರ್ಷಿಕೆಯಲ್ಲಿ 2006–07ನೇ ಸಾಲಿಗೆ ಕ್ರಿಯಾ ಯೋಜನೆಯನ್ನು ರೂಪಿಸುವ ಸಲುವಾಗಿ ಮಂಡ್ಯ ನಗರಸಭೆ ಅಧ್ಯಕ್ಷರವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡಂತೆ 5 ಜನ ಸದಸ್ಯರುಗಳನ್ನು ಒಳಗೊಂಡ ಸಮಿತಿಯನ್ನು ರಚಿಸಿ ಹಿಂದಿನ ಸಭೆ ನಿರ್ಣಯಕ್ಕೆ ತಿದ್ದುಪಡಿ ಮಾಡಿಕೊಂಡು ತೀರ್ಮಾನಿಸಲಾಯಿತು.

1) ಶ್ರೀಮತಿ.ಸಿ.ವಿಜಯಲಕ್ಷ್ಮಿ ರವರು , ಅಧ್ಯಕ್ಷರು
2) ಶ್ರೀಮತಿ.ನಸ್ರೀನ್ ತಾಜ್ ರವರು , ಉಪಾಧ್ಯಕ್ಷರು
3) ಶ್ರೀ.ಎಂ.ಡಿ.ಜಯರಾಂ ರವರು, 9ನೇ ವಾರ್ಡ್ ಸದಸ್ಯರು
4) ಶ್ರೀಮತಿ.ಎಂ.ಎಸ್.ಸುಜಾತಮಣಿರವರು, 17ನೇ ವಾರ್ಡ್ ಸದಸ್ಯರು
5) ಶ್ರೀ.ನಂಜಯ್ಯರವರು, 21ನೇ ವಾರ್ಡ್ ಸದಸ್ಯರು
6) ಶ್ರೀಮತಿ.ಚನ್ನಮ್ಮರವರು, 24ನೇ ವಾರ್ಡ್ ಸದಸ್ಯರು.

ಶ್ರೀಮತಿ.ನಿರ್ಮಲ ಚಿಕ್ಕೇಗೌಡರವರು ಮಾತನಾಡುತ್ತಾ, ಹಿಂದಿನ ಸಭೆ ತೀರ್ಮಾನ ಸಂಖ್ಯೆ:18(20)ರಲ್ಲಿ ಈ ನಗರಸಭೆಗೆ ಸೇರಿದ ಹಳೇ ಕಛೇರಿ ಕಟ್ಟಡದಲ್ಲಿ ಪೌರ ಸೇವಾ ನೌಕರರ ಸಂಘದ ನಾಮಫಲಕ ಹಾಕಿರುವುದರ ಬಗ್ಗೆ ಆಕ್ಷೇಪವನ್ನು ವ್ಯಕ್ತಪಡಿಸಲಾಗಿದ್ದು , ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸದಸ್ಯರುಗಳಾದ ಶ್ರೀ.ಎಂ.ಸಿ.ಮಹಾಲಿಂಗುರವರು ಮತ್ತು ಶ್ರೀ.ಮಹದೇವು (ಕಿಟ್ಟಿ)ರವರುಗಳು ಧ್ವನಿಗೂಡಿಸಿದ್ದರು. ಸದರಿ ಸಭೆಯಲ್ಲಿ ಹಾಜರಿದ್ದ ಮಂಡ್ಯ ಜಿಲ್ಲಾ ಪೌರ ಸೇವಾ ನೌಕರರ ಸಂಘದ ಅಧ್ಯಕ್ಷರಾದ ಶ್ರೀ.ಕೆ.ಕುಳ್ಳೇಗೌಡರವರು ನಾಮಫಲಕ ಹಾಕಿರುವುದು ತಪ್ಪೆಂದು ಒಪ್ಪಿಕೊಂಡು ಕ್ಷಮೆಯಾಚಿಸಿದ್ದರು. ಈ ವಿಷಯವು ಹಿಂದಿನ ನಿರ್ಣಯದಲ್ಲಿ ಕೈಬಿಟ್ಟಿರುವುದನ್ನು ನಿರ್ಣಯದಲ್ಲಿ ಸೇರಿಸುವಂತೆ ಸೂಚಿಸಿದರು. ಇವರ ಸೂಚನೆಯಂತೆ ಸಭೆಯಲ್ಲಿ ಪೌರ ಸೇವಾ ನೌಕರರ ಸಂಘದ ನಾಮಫಲಕವನ್ನು ತೆಗೆದುಹಾಕುವುದೆಂದು ತೀರ್ಮಾನಿಸಲಾಯಿತು.

ಶ್ರೀ.ಕೆ.ಕುಳ್ಳೇಗೌಡರವರು ಡಿ–ಗ್ರೂಪ್ ನೌಕರರಾಗಿದ್ದು ಕೆಲವು ಖಾತಾ ಅರ್ಜಿಗಳಿಗೆ ಸರ್ವೆಯರ್ ಎಂಬುದಾಗಿ ವರದಿ ನೀಡಿ ತಮ್ಮ ಸಹಿ ಮಾಡುತ್ತಿರುತ್ತಾರೆ. ಇದು ಕಾನೂನು ರೀತ್ಯಾ ಸರಿಯೇ ಎಂದು ಸದಸ್ಯರಾದ ಶ್ರೀ.ಮಹದೇವು (ಕಿಟ್ಟಿ)ರವರು ಪ್ರಶ್ನಿಸಲಾಗಿ, ಸದರಿ ವಿಷಯದ ಬಗ್ಗೆ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಮಾನ್ಯ ಅಧ್ಯಕರು ಪೌರಯುಕ್ತರಿಗೆ ನೀಡಿದ ಸೂಚನೆಯನ್ನು ಸಭೆಯು ಅನುಮೋದಿಸಿ ಒಪ್ಪಿ ತೀರ್ಮಾನಿಸಲಾಯಿತು.

**ವಿಷಯ:2:–** 2006ನೇ ಮೇ ಮತ್ತು ಜೂನ್ ಮಾಹೆಗಳ ಜಮ ಖರ್ಚುಗಳನ್ನು ಓದಿ ರೆಕಾರ್ಡು ಮಾಡುವ ವಿಚಾರ.

**ತೀರ್ಮಾನ:2:–** ಜಮಾ ಖರ್ಚುಗಳ ತೀರ್ಮಾನದ ವಿಷಯದ ಬಗ್ಗೆ ಶ್ರೀ.ಬಿ.ಎಂ.ಬಾಷರವರು ಚರ್ಚೆಗೆ ಬಂದಾಗ ಕ್ರಮ ಸಂಖ್ಯೆ:30 ರಂತೆ ಗೋದಾಮು ನಿರ್ಮಾಣದ ಅನುಮತಿ ಶುಲ್ಕ 10,500–00 ರೂ.ಗಳನ್ನು ಪಡೆದಿರುವ ಬಗ್ಗೆ ವಿವರಣೆ ಕೋರಿದರು. ಅದಕ್ಕೆ ಅಧ್ಯಕ್ಷರು ಸಭೆಯಲ್ಲಿ ಉತ್ತರಿಸಿ ಪೌರಾಯುಕ್ತರಾಗಿದ್ದ ಶ್ರೀ.ವಿ.ಹೆಚ್.ಕೃಷ್ಣಮೂರ್ತಿರವರು ಮಂಡ್ಯ ನಗರ ಕಲ್ಲಹಳ್ಳಿಯಲ್ಲಿ ಬರುವ ಸರ್ವೆ ನಂಬರ್ 224/1–ಪಿ1 ರ 1 ಎಕರೆ 23 ಗುಂಟೆ ಪ್ರದೇಶದಲ್ಲಿ ಗೋದಾಮು ನಿರ್ಮಿಸಲು ಅನುಮತಿ ನೀಡಲು ಈ ಶುಲ್ಕ ಪಡೆದಿರುವುದಾಗಿ ತಿಳಿಸಿದರು. ಅದಕ್ಕೆ ಶ್ರೀ.ಬಿ.ಎಂ.ಬಾಷರವರು ಮತ್ತು ಶ್ರೀ.ಬಿ.ರಾಜಣ್ಣರವರು ಆಕ್ಷೇಪಣೆ ವ್ಯಕ್ತಪಡಿಸಿ , ಶುಲ್ಕ ಪಡೆದ ನಂತರ ಅವರಿಗೆ ನಗರಸಭೆಯಿಂದ ಅನುಮತಿ ನೀಡದಿರುವ ಬಗ್ಗೆ ಮರುಪ್ರಶ್ನಿಸಿದರು. ಅಧ್ಯಕ್ಷರು ದಾಖಲೆ ಪ್ರಕಾರ ಕಂಡುಬಂದಿಲ್ಲವೆಂಬುದಾಗಿ ತಿಳಿಸಿದಾಗ ಸಭೆಯಲ್ಲಿ ಗದ್ದಲ ಉಂಟಾಗಿ ನಗರಸಭೆಗೆ ಬರಬೇಕಾದ ಅಭಿವೃದ್ಧಿ ಶುಲ್ಕ/ಉತ್ತಮತೆ ಶುಲ್ಕ/ಪರವಾನಗಿ ಶುಲ್ಕಗಳಿಂದ ಸುಮಾರು ಅಂದಾಜು 20.00 ಲಕ್ಷ ರೂಪಾಯಿಗಳಷ್ಟು ನಗರಸಭೆಗೆ ನಷ್ಟ ಉಂಟಾಗಿದೆ. ಇದಕ್ಕೆ ಪರೋಕ್ಷವಾಗಿ ಪೌರಾಯುಕ್ತರಾಗಿದ್ದ ಶ್ರೀ.ವಿ.ಹೆಚ್.ಕೃಷ್ಣಮೂರ್ತಿರವರೇ ನೇರ ಹೊಣೆಗಾರರು ಹಾಗೂ ಇದರಲ್ಲಿ ಭಾರಿ ಭ್ರಷ್ಟಾಚಾರ ನಡೆದಿರುವುದರಿಂದ ನಗರಸಭೆಗೆ ಹಲವಾರು ಪ್ರಕರಣಗಳಲ್ಲಿ ನಷ್ಟವುಂಟಾಗಿರುತ್ತದೆ. ಈ ನಷ್ಟಕ್ಕೆ ಕಾರಣಕರ್ತರಾಗಿರುವ ಪೌರಾಯುಕ್ತರಾಗಿದ್ದ ಶ್ರೀ.ವಿ.ಹೆಚ್.ಕೃಷ್ಣಮೂರ್ತಿರವರೇ ಭರಿಸುವಂತೆ ಕ್ರಮ ಕೈಗೊಳ್ಳುವುದೆಂದು ಕಾರಣ ಶ್ರೀ.ಕೆ.ಗುರುಸ್ವಾಮಿರವರು ನಗರಸಭೆಗೆ ಅನುಮತಿಗಾಗಿ ಅರ್ಜಿ ಸಲ್ಲಿಸಿದ್ದರೂ ಸಹ ಅವರಿಗೆ ಕರ್ನಾಟಕ ಪುರಸಭೆ 1964ರ ಕಾಯಿದೆ ಕಲಂ 187 ರಂತೆ ಕ್ರಮ ಕೈಗೊಳ್ಳದೇ ಹೋದ ಕಾರಣ ಇವರೇ ನೇರ ಹೊಣೆಗಾರರೆಂದು ಅಗತ್ಯವಿದ್ದಲ್ಲಿ ಈ ಪ್ರಕರಣವನ್ನು ಮಾನ್ಯ ಲೋಕಾಯುಕ್ತ ಅಥವಾ ಸಿ.ಓ.ಡಿ. ತನಿಖೆಗೆ ವಹಿಸುವುದೆಂದು ಸಭೆಯಲ್ಲಿ ಸದಸ್ಯರಾದ ಶ್ರೀ.ಬಿ.ರಾಜಣ್ಣರವರು, ಶ್ರೀ.ಬಿ.ಎಂ.ಬಾಷರವರು, ಶ್ರೀ.ಮಹದೇವ (ಕಿಟ್ಟಿ)ರವರು ಸೂಚಿಸಿದರು. ಇವರುಗಳ ಸೂಚನೆಯನ್ನು ಶ್ರೀ.ಸುಬ್ರಹ್ಮಣ್ಯರವರು ಮತ್ತು ಶ್ರೀಮತಿ.ನಿರ್ಮಲ ಚಿಕ್ಕೇಗೌಡರವರು ಅನುಮೋದಿಸಿದರು. ನಂತರ ಸಭೆಯು ಈ ಬಗ್ಗೆ ತನಿಖೆ ನಡೆಸಲು ತೀರ್ಮಾನಿಸಲಾಯಿತು. ಇದಕ್ಕೆ ಶ್ರೀ.ಎಂ.ಡಿ.ಜಯರಾಂರವರು ಮತ್ತು ಶ್ರೀ.ಹೆಚ್.ಕೆ.ರುದ್ರಪ್ಪರವರು ವಿರೋಧ ವ್ಯಕ್ತಪಡಿಸಿದರು.

2005–06ನೇ ಸಾಲಿನಲ್ಲಿ ನಗರಸಭೆಯಿಂದ ಹೊಸದಾಗಿ 2 ಸಂಖ್ಯೆ ವಸತಿ ಗೃಹಗಳನ್ನು ನಿರ್ಮಿಸಲಾಗಿತ್ತು. ಈ ಕಟ್ಟಡವೊಂದರಲ್ಲಿ ಈ ಹಿಂದಿನ ಪೌರಾಯುಕ್ತರಾದ ಶ್ರೀ.ವಿ.ಹೆಚ್.ಕೃಷ್ಣಮೂರ್ತಿರವರು ತಾವು ವಾಸವಿದ್ದ ಹಳೇ ವಸತಿ ಗೃಹವನ್ನು ತೆರವುಗೊಳಿಸಿ ಕೌನ್ಸಿಲ್ ಗಮನಕ್ಕೆ ಅಥವಾ ನಗರಸಭಾಧ್ಯಕ್ಷರವರ ಗಮನಕ್ಕೆ ತಾರದೇ ಏಕಾಏಕಿ ತನ್ನ ಅಧಿಕಾರ ದುರ್ಬಳಕೆ ಮಾಡಿಕೊಂಡು ಸರ್ವಾಧಿಕಾರಿಯಂತೆ ವರ್ತಿಸಿ ಕೌನ್ಸಿಲ್ ಅನುಮತಿ ಇಲ್ಲದೇ ಹೊಸದಾಗಿ ನಿರ್ಮಿಸಲಾಗಿರುವ ವಸತಿ ಗೃಹಕ್ಕೆ ಪೌರಾಯುಕ್ತರ ಅಧಿಕೃತ ವಸತಿ ಗೃಹದಿಂದ ಸ್ಥಳಾಂತರ ಮಾಡಿಕೊಂಡಿರುತ್ತಾರೆ. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಸದಸ್ಯರುಗಳಾದ ಶ್ರೀ.ಬಿ.ಎಂ.ಬಾಷರವರು ಮತ್ತು ಶ್ರೀ.ಮಹದೇವು (ಕಿಟ್ಟಿ)ರವರು ಇದರ ಬಗ್ಗೆ ಏನು ಕ್ರಮ ಕೈಗೊಂಡಿರುತ್ತೀರಿ ಎಂಬುದಾಗಿ ಸಭೆಯಲ್ಲಿ ಪ್ರಶ್ನಿಸಿದರು. ಶ್ರೀ.ವಿ.ಹೆಚ್.ಕೃಷ್ಣಮೂರ್ತಿರವರು ಹಾಲಿ ವಸತಿ ಗೃಹ ಇದ್ದರೂ ಸಹ ಕೌನ್ಸಿಲ್ ಗಮನಕ್ಕೆ ಬಾರದೇ ಹೊಸದಾಗಿ ನಿರ್ಮಿಸಿರುವ ವಸತಿ ಗೃಹಕ್ಕೆ ಸೇರಿಕೊಂಡಿರುವುದು ಸರ್ವಾಧಿಕಾರಿ ಧೋರಣೆ ಮನೋಭಾವವಾಗಿರುತ್ತದೆ. ಆದ್ದರಿಂದ ಕೂಡಲೇ ಕ್ರಮವಾಗಿ ಹೊಸ ವಸತಿ ಗೃಹ ಕಟ್ಟಡವನ್ನು ಕೌನ್ಸಿಲ್ ಅನುಮತಿ ಇಲ್ಲದೇ ಆಕ್ರಮಿಸಿಕೊಂಡಿರುವ ಶ್ರೀ.ವಿ.ಹೆಚ್.ಕೃಷ್ಣಮೂರ್ತಿರವರನ್ನು ಪೋಲೀಸ್ ವರಿಷ್ಠಾಧಿಕಾರಿಗಳ ನೆರವು ಪಡೆದು ತಕ್ಷಣವೇ ಸದರಿ ವಸತಿ ಗೃಹದಿಂದ ಖಾಲಿ ಮಾಡಿಸಲು ತೀರ್ಮಾನಿಸಲಾಯಿತು. ಮತ್ತು ನಗರಸಭೆಯಿಂದ ನಿರ್ಮಿಸಿರುವ ಹೊಸ ವಸತಿ ಗೃಹ ಕಟ್ಟಡಗಳನ್ನು ನಮ್ಮ ನಗರಸಭೆ ಆಸ್ತಿ ವಹಿಯಲ್ಲಿ ದಾಖಲಿಸಿ ದೃಢೀಕರಿಸಿದ ನಂತರ ವಸತಿ ಗೃಹಗಳನ್ನು ಅಧಿಕಾರಿಗಳು/ಸಿಬ್ಬಂದಿಯವರಿಗೆ ನೀಡುವಾಗ ಕೌನ್ಸಿಲ್ ಅನುಮತಿ ಪಡೆದು ನೀಡಲು ಕ್ರಮ ವಹಿಸುವಂತೆ ಸೂಚಿಸಲಾಯಿತು. ಹಾಗೂ ಅನಧಿಕೃತವಾಗಿ ವಸತಿ ಗೃಹದಲ್ಲಿ ವಾಸವಿರುವ ನೌಕರರನ್ನು ತೆರವುಗೊಳಿಸಲು ತೀರ್ಮಾನಿಸಲಾಯಿತು.

2006ನೇ ಮೇ ಮಾಹೆಯ ಖರ್ಚಿನಲ್ಲಿ ಶ್ರೀ.ಬಿ.ಎಂ.ಬಾಷರವರು ಮಾತನಾಡಿ ಐ.ಡಿ.ಎಸ್.ಎಂ.ಟಿ. ಮಳಿಗೆಗಳ ಬಾಬ್ತು ಪಾವತಿಸಿರುವ ಮೊತ್ತವನ್ನು ಐ.ಡಿ.ಎಸ್.ಎಂ.ಟಿ. ಖಾತೆಯಿಂದ ವಾಪಸ್ ಪಡೆದು ನಗರಸಭಾ ನಿಧಿಗೆ ಜಮಾ ಮಾಡಲು ಸೂಚಿಸಿದರು. ನಂತರ ಮುಂದೆ ಈ ರೀತಿ ಆಗಬಾರದೆಂದು ತಿಳಿಸಿದರು.

ಶ್ರೀ.ಕೆ.ದೊರೆಸ್ವಾಮಿರವರನ್ನು ನಗರಸಭೆ ವಕೀಲರನ್ನಾಗಿ ನೇಮಕ ಮಾಡಿರುವುದನ್ನು ಈ ಹಿಂದೆ ಬದಲಾಯಿಸಲು ತೀರ್ಮಾನವಾಗಿದ್ದು ಬೇರೆ ವಕೀಲರನ್ನು ನೇಮಕ ಮಾಡಿರುವುದಕ್ಕೆ ಮಾನ್ಯ ಅಧ್ಯಕ್ಷರವರರಿಗೆ ಅಧಿಕಾರ ನೀಡಲಾಗಿದ್ದು ಶ್ರೀ.ಎಂ.ಬಿ.ರಾಜಶೇಖರ್ ಮತ್ತು ಶ್ರೀ.ಜೈನ್ ರವರು ಮನವಿ ಸಲ್ಲಿಸಿದ್ದನ್ನು ಅಧ್ಯಕ್ಷರು ಸಭೆ ಗಮನಕ್ಕೆ ತಂದು ಶ್ರೀ.ಎಂ.ಬಿ.ರಾಜಶೇಖರ್‌ರವರನ್ನು ನೇಮಿಸಿಕೊಳ್ಳುವುದಾಗಿ ತಿಳಿಸಿದರು ಇದಕ್ಕೆ ಶ್ರೀ.ಬಿ.ಎಂ.ಬಾಷ , ಶ್ರೀಮತಿ.ನಿರ್ಮಲ ಚಿಕ್ಕೇಗೌಡ,ಶ್ರೀ.ಟಿ.ಶಂಕರ್‌ರವರು ಒಪ್ಪಿಗೆ ಎಂಬುದಾಗಿ ಸೂಚಿಸಿದರು. ಮತ್ತು ಶ್ರೀ.ಮಹದೇವು (ಕಿಟ್ಟಿ),ಶ್ರೀ.ಬಿ.ರಾಜಣ್ಣ, ಶ್ರೀಮತಿ.ಎಂ.ಗೀತಾ ರಾಮಕೃಷ್ಣರವರು ;ವಕೀಲರಾದ ಶ್ರೀ.ಜೈನ್ ರವರನ್ನು ನೇಮಕ ಮಾಡಿಕೊಳ್ಳಲು ಸೂಚಿಸಿದರು. ನಂತರ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿ ಈ ಇಬ್ಬರು ವಕೀಲರನ್ನು ನೇಮಕ ಮಾಡಿಕೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು.

2006ನೇ ಮೇ ಮಾಹೆ ಜಮಾ ವಿವರ ತ:ಖ್ತೆ ಕ್ರಮ ಸಂಖ್ಯೆ:30 ರಲ್ಲಿ 10,500/- ರೂ.ಗಳನ್ನು ನಗರಸಭೆಗೆ ಜಮಾ ಪಡೆದಿರುವುದನ್ನು ಹೊರತು ಪಡಿಸಿ 2006ನೇ ಮೇ ಮತ್ತು ಜೂನ್ ಮಾಹೆಗಳ ಜಮಾ ಖರ್ಚುಗಳನ್ನು ಒಪ್ಪಲಾಯಿತು.

**ವಿಷಯ:3:-** ದಿನಾಂಕ:7-6-2006ರಲ್ಲಿ ಮುಂದೂಡಿದ ವಿಷಯಗಳು.

ಐ.ಡಿ.ಎಸ್.ಎಂ.ಟಿ. ಯೋಜನೆಯಡಿಯಲ್ಲಿ ಈ ಕೆಳಕಂಡ ಸ್ಥಳಗಳಲ್ಲಿರುವ ವಾಣಿಜ್ಯ ಮಳಿಗೆಗಳನ್ನು ದುರಸ್ಥಿ ಮಾಡುವ ಬಗ್ಗೆ ಅಂದಾಜು ವೆಚ್ಚವನ್ನು ಒಪ್ಪುವ ವಿಚಾರ.

| | |
|---|---|
| (1) ಬಂದೀಗೌಡ ಬಡಾವಣೆಯಲ್ಲಿರುವ 6 ಸಂಖ್ಯೆ:ವಾಣಿಜ್ಯ ಮಳಿಗೆಗಳು | ಅಂದಾಜು ರೂ. 1,40,000-00 |
| (2) ಬನ್ನೂರು ರಸ್ತೆ ಗ್ರಾಮಾಂತರ ಪೋಲೀಸ್ ಸ್ಟೇಷನ್ ಮುಂಭಾಗವಿರುವ ವಾಣಿಜ್ಯ ಮಳಿಗೆಗಳು | ಅಂದಾಜು ರೂ. 1,40,000-00 |
| (3) ಸುಭಾಷ್‌ನಗರ ಶಿವನಂಜಪ್ಪ ಪಾರ್ಕ್ ಬಳಿ ಇರುವ 6 ಸಂಖ್ಯೆ ವಾಣಿಜ್ಯ ಮಳಿಗೆಗಳು | ಅಂದಾಜು ರೂ. 1,40,000-00 |
| (4) ಗಾಂಧಿನಗರ ಪಂಪ್ ಹೌಸ್ ಹತ್ತಿರವಿರುವ 6 ಸಂಖ್ಯೆ ವಾಣಿಜ್ಯ ಮಳಿಗೆಗಳು | ಅಂದಾಜು ರೂ. 1,40,000-00 |
| (5) ಸಂತೆ ಮೈದಾನದಲ್ಲಿರುವ 6 ಸಂಖ್ಯೆ ವಾಣಿಜ್ಯ ಮಳಿಗೆಗಳು | ಅಂದಾಜು ರೂ. 1,40,000-00 |
| (6) ಕುವೆಂಪು ನಗರದಲ್ಲಿರುವ 6 ಸಂಖ್ಯೆ ವಾಣಿಜ್ಯ ಮಳಿಗೆಗಳು | ಅಂದಾಜು ರೂ. 1,40,000-00 |

**ತೀರ್ಮಾನ:3:-** ಅಂದಾಜನ್ನು ಒಪ್ಪಲಾಯಿತು. ಕಾನೂನು ರೀತ್ಯಾ ಟೆಂಡರ್ ಕರೆದು ಕ್ರಮ ವಹಿಸಲು ತೀರ್ಮಾನಿಸಲಾಯಿತು.

**ವಿಷಯ:4:-** ಶೇಕಡ 18ರ ಲೆಕ್ಕ ಶೀರ್ಷಿಕೆಯಡಿಯಲ್ಲಿ ಈ ಕೆಳಕಂಡ ಅಂಬೇಡ್ಕರ್ ಸಮುದಾಯ ಭವನಗಳಿಗೆ ಸುಣ್ಣ ಬಣ್ಣ ಮಾಡಿಸುವ ಬಗ್ಗೆ ಬಂದಿರುವ ಟೆಂಡರ್‌ಗಳ ತುಲನಾತ್ಮಕ ದರ ಪಟ್ಟಿಯನ್ನು ಅನುಮೋದಿಸುವ ವಿಚಾರ.

**ತೀರ್ಮಾನ:4:-** ತುಲನಾತ್ಮಕ ಪಟ್ಟಿಯನ್ನು ಅನುಮೋದಿಸಲಾಯಿತು.

**ವಿಷಯ:5:-** ಮಂಡ್ಯ ನಗರಸಭಾ ವ್ಯಾಪ್ತಿಯಲ್ಲಿ ನಿರ್ಮಲ ನಗರ ಯೋಜನೆಯಡಿಯಲ್ಲಿ ಲ್ಯಾಂಡ್ ಫಿಲ್ ಸೈಟನ್ನು ಅಭಿವೃದ್ಧಿಪಡಿಸಲು 81.05ಲಕ್ಷ ರೂ.ಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ಮೇಲ್ಕಂಡ 81.05ಲಕ್ಷ ರೂ.ಗಳಲ್ಲಿ ನಗರಸಭೆಯಿಂದ ಅರ್ಧ ಭಾಗ ಹಣವನ್ನು ನೀಡಬೇಕಾಗಿರುತ್ತೆ. ಇನ್ನು ಉಳಿಕೆ ಅರ್ಧ ಭಾಗ ಹಣವನ್ನು ಸರ್ಕಾರದಿಂದ ಬಿಡುಗಡೆಗೊಳಿಸಲು ಚರ್ಚಿಸಿ ತೀರ್ಮಾನ ಕೈಗೊಳ್ಳತಕ್ಕ ವಿಚಾರ.

**ತೀರ್ಮಾನ:5:-** ಸರ್ಕಾರದಿಂದ ಬಂದಿರುವ ಅರ್ಧ ಭಾಗದ ಜೊತೆಗೆ ನಗರಸಭಾ ನಿಧಿಯಿಂದ ಉಳಿಕೆ ಅರ್ಧ ಭಾಗವನ್ನು ಭರಿಸಿ ಕಾಮಗಾರಿಗಳನ್ನು ಮಾಡಿಸುವುದೆಂದು ತೀರ್ಮಾನಿಸಲಾಯಿತು.

**ವಿಷಯ:6:-** ಪೌನಿ/ಜಂನಿಹ/ಎಸ್‌ಎಫ್‌ಸಿ/06/2006-07 ದಿನಾಂಕ:27-5-2006ರಂತೆ ರೂ.1.00ಕೋಟಿ ಎಸ್.ಎಫ್.ಸಿ ನಿಧಿಯಲ್ಲಿ ಬಂದಿರುವ ಅನುದಾನಕ್ಕೆ ಕ್ರಿಯಾ ಯೋಜನೆಯನ್ನು ವಾರ್ಡ್‌ವಾರು ತಲಾ 3.00ಲಕ್ಷ ಗಳಿಗೆ ಅಂದಾಜು ತಯಾರಿಸಿದ್ದು ಕ್ರಿಯಾ ಯೋಜನೆಯನ್ನು ಒಪ್ಪುವ ವಿಚಾರ.

**ತೀರ್ಮಾನ:6:-** ವಿಷಯವನ್ನು ಮುಂದೂಡಲಾಯಿತು.

**ವಿಷಯ:7:-** ಮಾನ್ಯ ಜಿಲ್ಲಾಧಿಕಾರಿಗಳು, ಮಂಡ್ಯರವರ ಅಧಿಕೃತಜ್ಞಾಪನ ಪತ್ರ ಸಂಖ್ಯೆ:ಮುನಿಸಿ(2) 283/2006-07 ದಿನಾಂಕ: 4-5-2006ರಂತೆ ಖಾತಾ ನಂಬರ್ ಡಿ7/2307/1084/2288ರ ಬಾಬ್ತು $\frac{20'+25'}{2}$x165 ಅಡಿಗಳನ್ನು ಶ್ರೀ.ಎಸ್.ಬಿ.ಕೆಂಪೇಗೌಡ ಮತ್ತು ಶ್ರೀ.ಎಸ್.ಬಿ.ಬೋರೇಗೌಡರವರುಗಳಿಂದ ಸಾರ್ವಜನಿಕ ರಸ್ತೆಗಾಗಿ ಭೂಸ್ವಾಧೀನಪಡಿಸಿಕೊಂಡಿದ್ದು, ಇಂದಿನ ಮಾರುಕಟ್ಟೆ ದರದ ಮೌಲ್ಯ ರೂ.8,91,000/-ಗಳನ್ನು ನಗರಸಭೆಯಿಂದ ಪರಿಹಾರ ನೀಡುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:7:-** ಪಾವತಿಸಬಹುದೆಂದು ತೀರ್ಮಾನಿಸಲಾಯಿತು.

**ವಿಷಯ:8:-** ನಗರಸಭೆ ಟೆಂಡರ್ ಪ್ರಕಟಣೆ ಸಂಖ್ಯೆ:ನಸಮಂ/ತಾಂತ್ರಿಕ/10/2006-07 ದಿನಾಂಕ:15-5-2006 ಟೆಂಡರ್‌ನಂತೆ ಬಂದಿರುವ ಟೆಂಡರ್‌ಗಳ ತುಲನಾತ್ಮಕ ಪಟ್ಟಿಯನ್ನು ಅನುಮೋದಿಸುವ ವಿಚಾರ.

**ತೀರ್ಮಾನ:8:-** ಟೆಂಡರನ್ನು ಒಪ್ಪಲಾಯಿತು. ಸಂಧಾನ ಸಭೆ ನಂತರ ಹೆಚ್ಚುವರಿಯಾದ ಮೊಬಲಗನ್ನು ನಗರಸಭೆ ನಿಧಿಯಿಂದ ಭರಿಸಿ ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು ತೀರ್ಮಾನಿಸಲಾಯಿತು.

(ಕ್ರಮ ಸಂಖ್ಯೆ:1ಕ್ಕೆ 2006-07ನೇ ಸಾಲಿನ ಎಸ್.ಆರ್.ದರಕ್ಕೆ ಶೇಕಡ 3 ಹೆಚ್ಚುವರಿ ),
( ಕ್ರಮಸಂಖ್ಯೆ:2ಕ್ಕೆ ಗುತ್ತಿಗೆದಾರರು ನಮೂದಿಸಿರುವ ದರ ಶೇ.0.57%, )
(ಕ್ರಮ ಸಂಖ್ಯೆ:3ಕ್ಕೆ ಶೇ.3% ಹೆಚ್ಚುವರಿ ದರ ನೀಡುವಂತೆ ತೀರ್ಮಾನಿಸಲಾಯಿತು )

**ವಿಷಯ:9:-** ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ಕಾರ್ಪೋರೇಷನ್ ಲಿಮಿಟೆಡ್ , ಬೆಂಗಳೂರುರವರ ಪತ್ರದ ಸಂಖಯೆ:ಮಂಡ್ಯ ಕೈವ/2ನೇ ಹಂತ/ನಾಸೌನಿ/2006-07 ದಿನಾಂಕ:12-6-2006ರಂತೆ 2ನೇ ಹಂತದ ಕೈಗಾರಿಕಾ ವಸಾಹತುವನ್ನು ಪೌರ ಸವಲತ್ತು ನಿರ್ವಹಣೆಗಾಗಿ ವಹಿಸಿಕೊಳ್ಳುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:9:-** ಉಳಿಕೆ ಕಾಮಗಾರಿ ಕೆಲಸಗಳನ್ನು ಪೂರ್ಣಗೊಳಿಸಿದ ನಂತರ ವಹಿಸಿಕೊಳ್ಳುವಂತೆ ತೀರ್ಮಾನಿಸಲಾಯಿತು.

**ವಿಷಯ:10:-** ಕಾರ್ಯದರ್ಶಿಗಳು, ರಂಗಚಾವಡಿ ರಿ: ಮಂಡ್ಯ ಇವರು ದಿವಂಗತ:ಡಾ.ರಾಜ್‌ಕುಮಾರ್ ರವರ ಸವಿನೆನಪು ಹಾಗೂ ದಿವಂಗತ ಶ್ರೀ.ಟಿ.ಎಲ್.ಪುರುಷೋತ್ತಮರವರ ಸ್ಮರಣಾರ್ಥ ಹೆಚ್.ಎಂ.ನಾಯಕ ನಾಟಕ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದರಿಂದ ಸದರಿಯವರಿಗೆ ನಗರಸಭೆ ಪ್ರಯೋಜಕತ್ವದಲ್ಲಿ ನಡೆಸಲು ರೂ.5,000/-ಗಳು ಸಹಾಯಧನವನ್ನು ಕೋರಿರುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:10:-** ರೂ.5,000/- (ಐದುಸಾವಿರ ರೂಪಾಯಿ)ಗಳನ್ನು ಪಾವತಿಸುವುದೆಂದು ತೀರ್ಮಾನಿಸಲಾಯಿತು.

**ವಿಷಯ:11:-** ಕಾರ್ಯದರ್ಶಿ , ಬಹುರಂಗ, ಮಂಡ್ಯರವರು ದಿವಂಗತ.ಶ್ರೀ.ಟಿ.ಎಲ್.ಪುರುಷೋತ್ತಮರವರ ಸ್ಮರಣಾರ್ಥ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಂಡಿದ್ದು ಸದರಿ ಕಾರ್ಯ ಕ್ರಮಕ್ಕೆ ರೂ.5,000/-ಗಳು ಸಹಾಯಧನ ಕೋರಿರುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:11:-** ರೂ.5,000/- (ಐದು ಸಾವಿರ ರೂಪಾಯಿ)ಗಳನ್ನು ಪಾವಾತಿಸುವುದೆಂದು ತೀರ್ಮಾನಿಸಲಾಯಿತು.

**ವಿಷಯ:12:-** ವಾರ್ಡ್ ನಂಬರ್ 32ರಲ್ಲಿ ದಿನಾಂಕ:15-2-2006ರ ಸಾಮಾನ್ಯ ಸಭೆಯ ವಿಷಯ 1 ರಂತೆ ತೀರ್ಮಾನವಾಗಿದ್ದು ರೂ.3.00 ಲಕ್ಷಗಳ ಕಾಮಗಾರಿ ಪೈಕಿ ಇನ್ನು ಉಳಿಕೆ ರೂ.1.00ಲಕ್ಷಗಳಿಗೆ ಕಾಮಗಾರಿ ಬದಲಾಗಿ ಸೋಡಿಯಂ ದೀಪಗಳನ್ನು ಖರೀದಿಸುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:12:-** ಒಪ್ಪಲಾಯಿತು. ಉಳಿಕೆ ರೂ.1.00ಲಕ್ಷ (ಒಂದು ಲಕ್ಷ) ಗಳಿಗೆ ಮೆಟಲ್ ಹಲಾಯ್ಡ್ ದೀಪಗಳನ್ನು ಖರೀದಿಸುವುದೆಂದು ತೀರ್ಮಾನಿಸಲಾಯಿತು ಹಾಗೂ ಬದಲಿ ಕಾಮಗಾರಿ ನಿರ್ವಹಣೆ ಹಾಗೂ ಟೆಂಡರ್ ಅನುಮೋದನೆಯ ಅಧಿಕಾರವನ್ನು ಮಾನ್ಯ ನಗರಸಭೆ ಅಧ್ಯಕ್ಷರು ಮತ್ತು ಪೌರಾಯುಕ್ತರಿಗೆ ನೀಡುವುದೆಂದು ತೀರ್ಮಾನಿಸಲಾಯಿತು.

**ವಿಷಯ:13:-** ವಾರ್ಡ್ ನಂಬರ್:3 ರಲ್ಲಿ ಶ್ರೀ.ಶಿವರಾಮು ರೈಸ್‌ಮಿಲ್ ಪಕ್ಕದ ಗಲ್ಲಿಯಲ್ಲಿ ಕಾಂಕ್ರೀಟ್ ಕೆಲಸ ನಿರ್ಮಾಣ ಮಾಡುವ ಬದಲು ಈಗ ಶ್ರೀ.ಜಯರಾಂ ಮನೆಯಿಂದ ಮಹದೇವಮ್ಮ ಮನೆವರೆಗೆ ಮಾರ್ಕೆಟ್ ರಸ್ತೆ ಗಲ್ಲಿಯಲ್ಲಿ ರೂ.50,000/- ಗಳಿಗೆ ಕಾಮಗಾರಿ ಕೆಲಸ ಮಾಡಿಸುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:13:-** ಬದಲಿ ಕಾಮಗಾರಿಗಳನ್ನು ಮಾನ್ಯ ಅಧ್ಯಕ್ಷರ ಗಮನಕ್ಕೆ ತಂದು ಮಾಡಿಸಿಕೊಳ್ಳಬಹುದೆಂದು ತೀರ್ಮಾನಿಸ ಲಾಯಿತು.

**ವಿಷಯ:14:-** ನಗರಸಭೆ ಕಛೇರಿಗೆ ಸೇರಿದ ಟ್ರ್ಯಾಕ್ಟರ್ ನಂ.ಕೆಎ.11/424/425 ಟ್ರ್ಯಾಕ್ಟರ್ ಮತ್ತು ಟ್ರೈಲರ್‌ಗಳನ್ನು ತುರ್ತಾಗಿ ದುರಸ್ಥಿ ಮಾಡಿಸುವ ವಿಚಾರ.

**ತೀರ್ಮಾನ:14:-** ಟೆಂಡರ್ ಕರೆದು ದುರಸ್ಥಿ ಮಾಡಿಸಬಹುದೆಂದು ತೀರ್ಮಾನಿಸಲಾಯಿತು.

**ವಿಷಯ:15:-** ಮಂಡ್ಯ ನಗರಸಭೆಯ ಸದಸ್ಯರುಗಳಿಗೆ ಆಸಕ್ತಿಯುಳ್ಳವರು ಕಂಪ್ಯೂಟರ್ ತರಬೇತಿ ಪಡೆಯಲು ನಗರಸಭೆಯಿಂದ ಸದಾವಕಾಶವನ್ನು ಕಲ್ಪಿಸಿಕೊಡುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:15:-** ಆಸಕ್ತಿಯುಳ್ಳ ಸದಸ್ಯರುಗಳ ಪಟ್ಟಿಯನ್ನು ಪಡೆದು ತರಬೇತಿಗೆ ನಿಯೋಜಿಸಲು ಕ್ರಮ ಕೈಗೊಳ್ಳಬಹುದೆಂದು ತೀರ್ಮಾನಿಸಲಾಯಿತು.

**ವಿಷಯ16:-** ವಾರ್ಡ್ ನಂಬರ್ 1ರ ನಾಲಬಂದವಾಡಿ ಚೌಕದಲ್ಲಿ ಮಹಿಳಾ ಸಮಾಜ ಟ್ರಸ್ಟ್ (ರಿ) , ಮಂಡ್ಯ ಇವರು ಪ್ರಾಥಮಿಕ ಶಾಲೆಯನ್ನು ನಡೆಸುತ್ತಾ ಇದ್ದು ಸದರಿ ಕಟ್ಟಡವು ತುಂಬಾ ಶಿಥಿಲವಾಗಿದ್ದು ಮೇಲ್ಛಾವಣಿಗಳು ಹಾಳಾಗಿದ್ದು ಸದರಿ ಶಾಲೆಯನ್ನು ದುರಸ್ಥಿ ಮಾಡುವುದರ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:16:-** ಕೈಬಿಡಬಹುದೆಂದು ತೀರ್ಮಾನಿಸಲಾಯಿತು.

**ವಿಷಯ:17:-** ಮಾನ್ಯ ಉಪಾಧ್ಯಕ್ಷರಾದ ಶ್ರೀಮತಿ.ನಸ್ರೀನ್ ತಾಜ್ ರವರಿಂದ ಬಂದಿರುವ ವಿಷಯ.

ಮಂಡ್ಯ ನಗರದ ಸಂತೆ ಮಾಳ ಹತ್ತಿರವಿರುವ ಸ್ಮಶಾನಕ್ಕೆ ಪೂರ್ಣವಾಗಿ ಕಾಂಪೌಂಡ್ ಹಾಕಿಸಲು 5,75,000/- ರೂಪಾಯಿಗಳು ವೆಚ್ಚ ತಗುಲುವುದಿದ್ದು, ಈಗಾಗಲೇ ಪ್ರತೀ ಸ್ಮಶಾನಾಭಿವೃದ್ಧಗಾಗಿ 3.00 ಲಕ್ಷ ರೂಪಾಯಿಗಳು ಮಂಜೂರಾಗಿದ್ದು, ಇನ್ನು ಉಳಿಕೆ 2,75,000/- ರೂಪಾಯಿಗಳನ್ನು ಮಂಜೂರುಮಾಡಿಕೊಡುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:17:-** ಒಪ್ಪಲಾಯಿತು. ಇದೇ ರೀತಿ ನಗರಸಭೆ ವ್ಯಾಪ್ತಿಯಲ್ಲಿರುವ ಎಲ್ಲಾ ಸ್ಮಶಾನಗಳ ಅಭಿವೃದ್ಧಿಗೆ ಈ ಹಿಂದೆ ಮಂಜೂರಾಗಿರುವ ರೂ. 3.00 ಲಕ್ಷ ಮತ್ತು ಈಗ 2.00 ಲಕ್ಷ ಸೇರಿ 5.00 ಲಕ್ಷ ರೂ.ಗಳ ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ಕ್ರಮ

ಕೈಗೊಳ್ಳಲು ತೀರ್ಮಾನಿಸಲಾಯಿತು. ಸಧ್ಯಕ್ಕೆ ಆಧ್ಯತೆ ಮೇರೆಗೆ 5 ಸ್ಮಶಾನಗಳನ್ನು ಆಯ್ಕೆ ಮಾಡಿ ಅಭಿವೃದ್ಧಿಪಡಿಸಲು ಸ್ಥಾಯಿ ಸಮಿತಿಗೆ ಒಪ್ಪಿಸಬಹುದೆಂದು ತೀರ್ಮಾನಿಸಲಾಯಿತು.

**ವಿಷಯ:18:-** ಮಾನ್ಯ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರುರವರ ಪತ್ರದ ಸಂಖ್ಯೆ:ಪೌನಿ/ಇತರೆ/ಮಂಜಿ/ಸಿಆರ್/89/2005-06 ದಿನಾಂಕ:26-9-2005 ರಂತೆ ಮಂಡ್ಯ ನಗರಸಭೆ ಕಛೇರಿ ವ್ಯವಸ್ಥಾಪಕರಾದ ಶ್ರೀ.ಎಂ.ಎ.ಬಾಲಚಂದ್ರರವರ ತಾಯಿಯ ವೈದ್ಯಕೀಯ ವೆಚ್ಚ ಮರುಪಾವತಿ ಬಿಲ್‌ಗೆ ಕೌನ್ಸಿಲ್ ಅನುಮೋದನೆ ಪಡೆದು ಕಳುಹಿಸಿಕೊಡುವಂತೆ ಕೋರಿರುವ ವಿಚಾರ.

**ತೀರ್ಮಾನ:18:-** ಒಪ್ಪಲಾಯಿತು.

**ವಿಷಯ:19:-** ಮಾನ್ಯ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯರವರ ಅಧಿಕೃತಜ್ಞಾಪನ ಪತ್ರ ಸಂಖ್ಯೆ:

1) ಮುನಿಸಿ(2)406/2005-06 ದಿನಾಂಕ:30-5-2006
2) ಮುನಿಸಿ(2) 341/2005-06 ದಿನಾಂಕ:03-06-2006
3) ಮುನಿಸಿ(2) 419/2005-07 ದಿನಾಂಕ:03-06-2006
4) ಮುನಿಸಿ(2) 408/2005-06 ದಿನಾಂಕ:31-05-2006
5) ಮುನಿಸಿ(2) 409/2005-06 ದಿನಾಂಕ:06-06-2005
6) ಮುನಿಸಿ(2) 489/2005-06 ದಿನಾಂಕ:14-06-2006
7) ಮುನಿಸಿ(2) 60/2006-07 ದಿನಾಂಕ:14-06-2006
8) ಮುನಿಸಿ(2) 470/2005-06 ದಿನಾಂಕ: 07-06-2006
9) ಮುನಿಸಿ(2) 409/2006-07 ದಿನಾಂಕ:07-06-2006
10) ಮುನಿಸಿ(2) 412/2006-07 ದಿನಾಂಕ:07-06-2006
11) ಮುನಿಸಿ(2) 41/2005-06 ದಿನಾಂಕ:07-06-2006

ಈ ಕೆಳಕಂಡ ನೌಕರರಿಗೆ ಒಂದೇ ಹುದ್ದೆಯಲ್ಲಿ 10,15,20 ವರ್ಷಗಳ ಸೇವೆ ಪೂರ್ಣಗೊಳಿಸಿರುವುದರಿಂದ ಕಾಲಮಿತಿ ಪದೋನ್ನತಿ ಬಡ್ತಿ , ಸ್ವಯಂಚಾಲಿತ ಮುಂಬಡ್ತಿ, ವಿಶೇಷ ಹೆಚ್ಚುವರಿ ಬಡ್ತಿ ಮಂಜೂರು ಮಾಡಿದ್ದು ವೇತನ ವ್ಯತ್ಯಾಸದ ಮೊಬಲಗನ್ನು ಪಾವತಿಸಿರುವುದರಿಂದ ಅನುಮೋದನೆ ನೀಡುವ ವಿಚಾರ.

1) ಹೊನ್ನಮ್ಮ ಡಿ ಗ್ರೂಪ್ ನೌಕರರು
2) ಮಾದಮ್ಮ ಡಿ ಗ್ರೂಪ್ ನೌಕರರು
3) ಜಯಮ್ಮ .ಆರ್. ಡಿ ಗ್ರೂಪ್ ನೌಕರರು
4) ನಂಜುಂಡಸ್ವಾಮಿ ಡಿ ಗ್ರೂಪ್ ನೌಕರರು
5) ನರಸಮ್ಮ ಕೋಂ. ನರಸಿಂಹಯ್ಯ ,ಡಿ ಗ್ರೂಪ್ ನೌಕರರು
6) ಬೋರೇಗೌಡ ಬಿನ್ ಚಾಮೇಗೌಡ, ಡಿ ಗ್ರೂಪ್ ನೌಕರರು
7) ಶಿವಲಿಂಗಯ್ಯ, ನಿವೃತ್ತ ಡಿ ಗ್ರೂಪ್ ನೌಕರರು
8) ರಾಮಕ್ಕ, ಪೌರಕಾರ್ಮಿಕರು
9) ವೆಂಕಟೇಶ ಬಿನ್ ಚಿಕ್ಕಮುನಿಸ್ವಾಮಿ, ಪೌರಕಾರ್ಮಿಕರು
10) ಮೋಹನ, ಪೌರಕಾರ್ಮಿಕರು
12) ಚಾಮುಂಡಿ, ಮೃತ ಪೌರಕಾರ್ಮಿಕರು

**ತೀರ್ಮಾನ:19:-** ಕಾನೂನು ಅನುಸರಿಸಿ ಪಾವತಿಸಬಹುದೆಂದು ತೀರ್ಮಾನಿಸಲಾಯಿತು.

**ವಿಷಯ:20:-** ಗೂಬೆ ಹಳ್ಳ 4ನೇ ಕ್ರಾಸ್‌ನಲ್ಲಿ ಬಾಕ್ಸ್ ಚರಂಡಿ ಕಾಮಗಾರಿ ಅಂದಾಜು ರೂ.50,000/- ಗಳ ಕಾಮಗಾರಿಯನ್ನು ಬದಲಿ ಕಾಮಗಾರಿ ಕೈಗೊಳ್ಳುವ ವಿಚಾರ.

**ತೀರ್ಮಾನ**:20:– ಒಪ್ಪಲಾಯಿತು. ಈ ಕಾಮಗಾರಿ ಕೈಗೊಳ್ಳುವ ವಿಚಾರವಾಗಿ ಅಧ್ಯಕ್ಷರು ಮತ್ತು ಪೌರಾಯುಕ್ತರಿಗೆ ಅಧಿಕಾರ ನೀಡಲಾಯಿತು.

**ವಿಷಯ**:21:–ಅಧ್ಯಕ್ಷರ ಅಪ್ಪಣೆ ಮೇರೆಗೆ ಸಭೆ ವೇಳೆಯಲ್ಲಿ ತರಬಹುದಾದ ಇತರೆ ಜರೂರಾತಿ ವಿಷಯಗಳು.

**ವಿಷಯ**:21(1):– ಮಾನ್ಯ ಜಿಲ್ಲಾಧಿಕಾರಿಗಳವರ ಪತ್ರ ಸಂಖ್ಯೆ:ಡಿಇವಿ/01/05–06 ದಿನಾಂಕ: 10–7–2006ರಂತೆ ಈ ಹಿಂದೆ ಮಂಡ್ಯ ನಗರಸಭೆಯ ಸುಭಾಷ್ ನಗರ ಬಡಾವಣೆಯ ಶಿವನಂಜಪ್ಪ ಪಾರ್ಕ್‌ನ ಅಸೆಸ್‌ಮೆಂಟ್ ನಂಬರ್ 1794ರ ಪೈಕಿ 150'X220ಅಡಿಗಳನ್ನು ಕೌನ್ಸಿಲ್ ನಿರ್ಣಯ ಸಂಖ್ಯೆ:347 ದಿನಾಂಕ:14–4–98ರಂತೆ ಡಾ:ಬಿ.ಆರ್.ಅಂಬೇಡ್ಕರ್ ಭವನ ನಿರ್ಮಾಣ ಮಾಡಲು ತೀರ್ಮಾನವಾಗಿದ್ದು ಸರ್ಕಾರದ ಆದೇಶದ ಸಂಖ್ಯೆ: ನಅಇ/72/ಟಿಎಂಡಿ/98 ದಿನಾಂಕ: 17–11–2000 ರಂತೆ 227'X340ಅಡಿಗಳ ನಿವೇಶನವನ್ನು ಡಾ.ಬಿ.ಆರ್.ಅಂಬೇಡ್ಕರ್ ಭವನ ನಿರ್ಮಾಣ ಮಾಡಲು ಮಂಜೂರಾತಿಯಾಗಿದ್ದು ಈ ಸಂಬಂಧ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ 16247/2000 ರಲ್ಲಿ ಮೊಖದ್ದಮೆ ದಾಖಲಾಗಿದ್ದು ಸದರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ಆಕ್ಷೇಪಣೆ ತ:ಖ್ತೆ ಸಲ್ಲಿಸುವ ಸಂಬಂಧ ಸರ್ಕಾರದ ವಕೀಲರ ಫ್ಯಾಕ್ಸ್ ಸಂದೇಶ ದಿನಾಂಕ:6–7–2006ರಂತೆ 227'X340ಅಡಿಗಳ ನಿವೇಶನವನ್ನು ಅಂಬೇಡ್ಕರ್ ಭವನ ನಿರ್ಮಾಣ ಮಾಡಲು ನೀಡುವ ಬಗ್ಗೆ ಕೌನ್ಸಿಲ್ ಸಭೆಯಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ**:21(1):– ಮಾನ್ಯ ಅಧ್ಯಕ್ಷರು ಮತ್ತು ಪೌರಾಯುಕ್ತರು ನಗರಸಭಾ ವಕೀಲರನ್ನು ಭೇಟಿ ಮಾಡಿ ಮಾಹಿತಿಯೊಡನೆ ಮುಂದಿನ ಸಭೆಗೆ ತರುವುದೆಂದು ತೀರ್ಮಾನಿಸಲಾಯಿತು.

**ವಿಷಯ:21(2):–** ವಾರ್ಡ್ ನಂಬರ್:12 ರ ಗಾಂಧಿನಗರ 2ನೇ ಕ್ರಾಸ್ ನಲ್ಲಿ ಒಳಚರಂಡಿ ದುರಸ್ಥಿ ಮಾಡಿಸಲು ಅಂದಾಜು ವೆಚ್ಚ ರೂ.12,000/– ಗಳಾಗಿರುವುದರಿಂದ ಸದರಿ ಕೆಲಸವನ್ನು ತುರ್ತಾಗಿ ಮಾಡಿಸಲು ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ 21(2):–** ಒಪ್ಪಲಾಯಿತು.

**ವಿಷಯ:21(3)**:– ವಾರ್ಡ್ ನಂಬರ್ 17 ಗಾಂಧಿನಗರ 8ನೇ ಕ್ರಾಸ್‌ನಲ್ಲಿ 1.00ಲಕ್ಷ ರೂಪಾಯಿಗಳ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ ಮಂಜೂರಾಗಿದ್ದು ಈಗಾಗಲೇ ಸದರಿ ಕಾಮಗಾರಿ ಅರ್ಧ ಭಾಗದ ರಸ್ತೆಗೆ 47,000/–ರೂ.ಗಳ ವೆಚ್ಚದಲ್ಲಿ ಅಭಿವೃದ್ಧಿಗೊಂಡು ಇನ್ನುಳಿಕೆ ಅರ್ಧ ಭಾಗದ ಕೆಲಸ ಆಗಬೇಕಾಗಿದ್ದು ಈ ಕ್ರಾಸ್ ರಸ್ತೆ 8ನೇ ಕ್ರಾಸ್ ಅಭಿವೃದ್ಧಿ ಬದಲಿಗೆ 6ನೇ ಕ್ರಾಸ್ ರಸ್ತೆಯನ್ನು 53,000/– ರೂ.ಗಳ ವೆಚ್ಚದಲ್ಲಿ ರಸ್ತೆ ಡಾಂಬರು ಕಾಮಗಾರಿಯನ್ನು ಮಾಡಿಸುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ**:21(3):– ಒಪ್ಪಲಾಯಿತು

**ವಿಷಯ:21(4):–** ಮಾನ್ಯ ಸದಸ್ಯರಾದ ಶ್ರೀ.ಹೆಚ್.ಸಿ.ಬೋರೇಗೌಡರವರಿಂದ ಬಂದಿರುವ ವಿಷಯ. ಮಂಡ್ಯ ನಗರ 16ನೇ ವಾರ್ಡ್ ಹೊಸಹಳ್ಳಿ ಬಡಾವಣೆ 4ನೇ ಕ್ರಾಸ್‌ನಲ್ಲಿ ಒಳಚರಂಡಿ ವ್ಯವಸ್ಥೆ ದುರಸ್ಥಿಯಾಗಬೇಕಾಗಿರುವುದರಿಂದ ಸದರಿ ಹಳೇ ಪೈಪನ್ನು ತೆಗೆಸಿ ಹೊಸದಾಗಿ ಶ್ರೀ.ಹನುಮಂತುರವರ ಮನೆಯಿಂದ ಶ್ರೀ.ಸಿದ್ದಪ್ಪರವರ ಮನೆವರೆಗೆ ಸುಮಾರು 200 ಅಡಿ ಒಳಚರಂಡಿ ಪೈಪ್ ಲೈನ್ ಅಳವಡಿಸಿ 3 ಸಂಖ್ಯೆ ಮ್ಯಾನ್ ಹೋಲ್ ಛೇಂಬರ್‌ಗಳನ್ನು ಮಾಡಿಸಲು ಅಂದಾಜು ವೆಚ್ಚ ರೂ.40,000/–ಗಳು ಆಗುವುದಾಗಿದ್ದು ಸದರಿ ಕಾಮಗಾರಿಯನ್ನು ಮಾಡಿಸುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ**:21(4):– ಒಪ್ಪಲಾಯಿತು.

**ವಿಷಯ:21(5):–** ಮಂಡ್ಯ ನಗರದ ಸಾದತ್ ನಗರ ಒಂದನೇ ಕ್ರಾಸ್ ಮತ್ತು 2ನೇ ಕ್ರಾಸ್‌ನಲ್ಲಿ ಒಳಚರಂಡಿ ಪೈಪ್ ಲೈನ್ ಗಳನ್ನು ಬದಲಾವಣೆ ಮಾಡಲು ಒಪ್ಪಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ**:21(5):- ಒಳಚರಂಡಿ ಪೈಪ್ ಲೈನ್ ಮತ್ತು ಮ್ಯಾನ್ ಹೋಲ್ ರಿಪೇರಿಗೆ ರೂ.2.00 ಲಕ್ಷಗಳು ಮತ್ತು ಬಸವೇಶ್ವರ ನಗರ ರಸ್ತೆಯಲ್ಲಿ ಡೆಕ್ ಹಾಕಿಸಲು ರೂ.86,000/- ಅಂದಾಜು ವೆಚ್ಚಗಳನ್ನು ಒಪ್ಪಲಾಯಿತು.

**ವಿಷಯ:21(6)**:- ಮಾನ್ಯ ಸದಸ್ಯರಾದ ಶ್ರೀ.ಎಂ.ಡಿ.ಜಯರಾಂರವರಿಂದ ಬಂದಿರುವ ವಿಷಯ. ವಾರ್ಡ್ ನಂಬರ್ 9ರಲ್ಲಿ ಶ್ರೀ.ಜಿ.ಆರ್.ರವಿಪ್ರಕಾಶ್ ರವರು ತಹಸೀಲ್ದಾರ್ ರವರ ಕಛೇರಿ ಮುಂಭಾಗದಲ್ಲಿ ನಂದಿನಿ ಮಿಲ್ಕ್ ಪಾರ್ಲರ್ ತೆರೆದಿರುತ್ತಾರೆ. ಆದ್ದರಿಂದ ಸದರಿಯವರಿಗೆ ಉದ್ದಿಮೆ ಪರವಾನಗಿ ಶುಲ್ಕ ಪಾವತಿಸಿಕೊಂಡು ಪರವಾನಗಿ ನೀಡುವುದರ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ**:21(6):- ಸ್ಥಳ ಪರಿಶೀಲನೆ ಮಾಡಿ ಕಾನೂನು ರೀತ್ಯಾ ಕ್ರಮ ಕೈಗೊಳ್ಳಬಹುದೆಂದು ತೀರ್ಮಾನಿಸಲಾಯಿತು.

**ವಿಷಯ:21(7)**:- ಶ್ರೀ.ಕಾಳೇಗೌಡ, ಬಿನ್ ಕಾಳೇಗೌಡ, ಚಿಕ್ಕಮಂಡ್ಯರವರು ಮನವಿ ಸಲ್ಲಿಸಿ ಇವರ ಇಬ್ಬರು ಅಂಧ ಮಕ್ಕಳಿಗೆ ಎಸ್.ಟಿ.ಡಿ. ಬೂತ್ ಮತ್ತು ಮಿಲ್ಕ್ ಪಾರ್ಲರ್ ತೆರೆಯಲು ಜನತಾ ತಾಂತ್ರಿಕ ವಿದ್ಯಾಲಯದ ದ್ವಾರದ ಎದುರಿನಲ್ಲಿ ಪೋಲೀಸ್ ಬಡಾವಣೆ ದಕ್ಷಿಣಕ್ಕೆ ಹಾಗೂ ಮಹಿಳಾ ಹಾಸ್ಟೆಲ್ ಮಧ್ಯೆ ಗಲ್ಲಿಯಲ್ಲಿ ನಡೆಸಲು ನೆಲ ಬಾಡಿಗೆ ಆಧಾರದ ಮೇಲೆ ಅನುಮತಿ ನೀಡುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ**:21(7):- ಸ್ಥಳ ಪರಿಶೀಲನೆ ಮಾಡಿ ಕಾನೂನು ಅನುಸರಿಸಿ ಕ್ರಮ ಕೈಗೊಳ್ಳಬಹುದೆಂದು ತೀರ್ಮಾನಿಸಲಾಯಿತು.

**ವಿಷಯ:21(8)**:-ಮಂಡ್ಯ ನಗರಸಭೆಯ ಕಾಮಗಾರಿ ವಿಭಾಗಕ್ಕೆ ಸ್ಪನ್ ಪೈಪ್ ಗಳು (ಸಿಮೆಂಟ್ ಪೈಪ್) ಅತ್ಯಾವಶ್ಯಕವಾಗಿ ಬೇಕಾಗಿರುವುದರಿಂದ ಟೆಂಡರ್ ಕರೆಯಲಾಗಿ ಬಂದಿರುವ ಟೆಂಡರ್‌ದಾರರುಗಳ ತುಲನಾತ್ಮಕ ದರ ಪಟ್ಟಿಯನ್ನು ಒಪ್ಪಿ ಅನುಮೋದಿಸುವ ವಿಚಾರ.

**ತೀರ್ಮಾನ**:21(8):- ತುಲನಾತ್ಮಕ ಪಟ್ಟಿಯನ್ನು ಒಪ್ಪಿ ಅನುಮೋದಿಸಲಾಯಿತು.

**ವಿಷಯ:21(9)**:- ರಾಜ್ಯ ಅಂಗವಿಕಲ ಕ್ರೀಡಾ ಮತ್ತು ಸಾಂಸ್ಕೃತಿಕ ಸಮ್ಮೇಳನದ ಸಮಿತಿಯವರು ಮನವಿ ಸಲ್ಲಿಸಿ ದಿನಾಂಕ: 28-7-2006 ಮತ್ತು 29-7-2007ರಂದು ರಾಜ್ಯ ಅಂಗವಿಕಲರ ಸಮ್ಮೇಳನಕ್ಕೆ ಅನೇಕ ಸಂಸದರು ಸರ್ಕಾರದ ಸಚಿವರುಗಳು, ರಾಷ್ಟ್ರ ಮತ್ತು ರಾಜ್ಯ ಪುರಸ್ಕೃತರು, ಗಣ್ಯರು ಆಗಮಿಸುತ್ತಿರುವುದರಿಂದ ಸಮ್ಮೇಳನಕ್ಕೆ ಸಹಾಯಧನ ಕೋರಿರುವ ವಿಚಾರ.

**ತೀರ್ಮಾನ**:21(9):- ರೂ.20,000/-( ಇಪ್ಪತ್ತು ಸಾವಿರ ರೂಪಾಯಿ)ಗಳನ್ನು ಪಾವತಿಸಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ:21(10)**:- ಮಂಡ್ಯ ನಗರದ ಪ್ರವಾಸಿ ಮಂದಿರದ ಪಕ್ಕ ಪಿ.ಇ.ಎಸ್. ಇಂಜಿನಿಯರಿಂಗ್ ಕಾಲೇಜು ರಸ್ತೆಯಿಂದ ಬಂದೀಖಾನೆ ಬನ್ನೂರು ರಸ್ತೆವರೆಗೆ ಹೊಸದಾಗಿ ಬೀದಿ ದೀಪಗಳನ್ನು ಖರೀದಿಸಿ ಅಳವಡಿಸುವ ವಿಚಾರ.

**ತೀರ್ಮಾನ**:21(10):- ಒಪ್ಪಲಾಯಿತು. ಸದರಿ ರಸ್ತೆಗೆ ವೈಟ್ ಮೆಟಲ್ ಅಲಾಯ್ಡ್ ದೀಪಗಳನ್ನು ಖರೀದಿಸಬಹುದೆಂದು ತೀರ್ಮಾನಿಸಲಾಯಿತು. ಈ ಸಂಬಂಧ ಎಸ್.ಆರ್.ದರ ಇಲ್ಲದಂತಹವುಗಳನ್ನು ಬೆಂಗಳೂರು ಮಹಾ ನಗರಪಾಲಿಕೆಯ ಅಧೀಕ್ಷಕ ಅಭಿಯಂತರರವರ ದರದಂತೆ ಅಂದಾಜು ತಯಾರಿಸಿ ಖರೀದಿಸಲು ಸಹ ಒಪ್ಪಲಾಯಿತು.

**ವಿಷಯ:21(11)**:-ವಾರ್ಡ್ ನಂಬರ್:1ರಲ್ಲಿ ನಂದಾ ಟಾಕೀಸ್ ಬ್ರಿಡ್ಜ್ ರಸ್ತೆಯಲ್ಲಿ ಬೀದಿ ದೀಪಗಳು ಇಲ್ಲದೆ ಇರುವುದರಿಂದ 8 ಸಂಖ್ಯೆ ಸೋಡಿಯಂ ದೀಪಗಳನ್ನು ನಂದಾ ಟಾಕೀಸ್ ರಸ್ತೆಯಿಂದ ಜಬ್ಬಾರ್ ಸರ್ಕಲ್‌ವರೆಗೆ ಬೀದಿ ದೀಪಗಳನ್ನು ಅಳವಡಿಸಿಕೊಡಬೇಕೆಂದುಕ ಶ್ರೀ.ಮಹದೇವು(ಕಿಟ್ಟಿ)ರವರು ಕೋರಿರುವ ವಿಚಾರ.

**ತೀರ್ಮಾನ**:21(11):– ದಿನಾಂಕ:8–5–2006ರ ವಿಶೇಷ ಸಭೆ ವಿಷಯ ಸಂಖ್ಯೆ:2, ಕ್ರಮ ಸಂಖ್ಯೆ (81)ರಲ್ಲಿ ನಿಗಧಿಯಾಗಿರುವ ದರದಂತೆ ಮೆಟಲ್ ಅಲಾಯ್ಡ್ ದೀಪಗಳನ್ನು ಖರೀದಿಸಿ ಅಳವಡಿಸಬಹುದೆಂದು ತೀರ್ಮಾನಿಸಲಾಯಿತು.

**ವಿಷಯ:21(12):–** ಶ್ರೀ.ಎಸ್.ಎಸ್.ಕೋಟಿ, ವಕೀಲರು, ಬೆಂಗಳುರುರವರು ಉಚ್ಛ ನ್ಯಾಯಾಲಯದ ಮೊಖದ್ದಮೆ ಸಂಖ್ಯೆ:4780/2006 ಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಕೇವಿಯಟ್ ಹಾಕಿದ್ದರ ಬಾಬ್ತು ಸದರಿ ಮೊಖದ್ದಮೆ ವೆಚ್ಚ ರೂ.15,000/–ಗಳನ್ನು ಪಾವತಿಸುವ ವಿಚಾರ.

**ತೀರ್ಮಾನ**:21(12):– ಕರ್ನಾಟಕ ಪುರಸಭೆ ಕಾಯ್ದೆ 1964 ನಿಯಮ 332 ರಂತೆ ದತ್ತವಾದ ಅಧಿಕಾರವನ್ನು ಉಪಯೋಗಿಸಿಕೊಂಡು ದಿನಾಂಕ:31–5–2006ರಂದು ವರ್ಗಾವಣೆ ಮಾಡುವ ನಿರ್ಣಯ ಕೈಗೊಂಡಿದ್ದು ಸರಿಯಷ್ಟೆ. ಈ ಬಗ್ಗೆ ಅಧ್ಯಕ್ಷರಿಗೆ ಅಧಿಕಾರ ನೀಡಲಾಗಿತ್ತು. ಅದರಂತೆ ಅಧ್ಯಕ್ಷರು ಸಂಬಂಧಪಟ್ಟ ಸಚಿವರು ಹಾಗೂ ಅಧಿಕಾರಿಗಳನ್ನು ಭೇಟಿಯಾಗಲು ಅನೇಕ ಸಾರಿ ಬೆಂಗಳೂರಿಗೆ ಪ್ರಯಾಣ ಮಾಡಿರುತ್ತಾರೆ. ಅವರ ಪ್ರಯಾಣದ ವೇಳೆಯಲ್ಲಿ ನಗರಸಭೆ ವಾಹನ ದುರಸ್ತಿಯಾದ ಕಾರಣ ವಾಹನವನ್ನು ಉಪಯೋಗಿಸಿರುವುದಿಲ್ಲ. ಶ್ರೀ.ವಿ.ಹೆಚ್.ಕೃಷ್ಣಮೂರ್ತಿ, ಪೌರಾಯುಕ್ತರವರ ವರ್ಗಾವಣೆ ಸರ್ಕಾರಿ ಆದೇಶ ಸಂಖ್ಯೆ: ನಅಇ/45/ಟಿಎಂಇ/2006 , ಬೆಂಗಳೂರು ದಿನಾಂಕ:31–5–2006ರಂತೆ ವರ್ಗಾವಣೆ ಮಾಡಿದ್ದನ್ನು ತಡೆಯಾಜ್ಞೆ ತಂದ ಕಾರಣ ಮತ್ತು ಅದನ್ನು ಸರ್ಕಾರದಲ್ಲಿ ವಜಾಗೊಳಿಸಿ ದಿನಾಂಕ:1–7–2006ರಂದು ವರ್ಗಾವಣೆಯಾಗಿರುತ್ತದೆ. ಈ ವರ್ಗಾವಣೆ ಆದೇಶದ ವಿರುದ್ಧವೂ ಶ್ರೀ.ವಿ.ಹೆಚ್.ಕೃಷ್ಣಮೂರ್ತಿರವರು ಮಂಡ್ಯ ನಗರಸಭೆಯಲ್ಲಿ ಪೌರಾಯುಕ್ತರಾಗಿ ಮುಂದುವರೆಯಲು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಂಖ್ಯೆ:4780/2006ರಂತೆ ಅರ್ಜಿ ಸಲ್ಲಿಸಿದ್ದು ಇದಕ್ಕೆ ನಗರಸಭೆ ಪರವಾಗಿ ಅಧ್ಯಕ್ಷರು ಕೇವಿಯಟ್ ಮತ್ತು ತಕರಾರು ಅರ್ಜಿಯನ್ನು ಉಚ್ಛ ನ್ಯಾಯಾಲಯದ ವಕೀಲರಾದ ಶ್ರೀ.ಎಸ್.ಎಸ್.ಕೋಟಿ ರವರ ಮುಖಾಂತರ ಸಲ್ಲಿಸಲಾಗಿದ್ದು ಗೌರವಾನ್ವಿತ ನ್ಯಾಯ ಮಂಡಳಿಯಲ್ಲಿ ಶ್ರೀ.ವಿ.ಹೆಚ್.ಕೃಷ್ಣಮೂರ್ತಿ ರವರಿಗೆ ತಡೆಯಾಜ್ಞೆ/ಮಧ್ಯಂತರ ಆದೇಶವನ್ನು ನೀಡಿರುವುದಿಲ್ಲ. ಈ ಬಾಬ್ತು ವಕಾಲತ್ತು ಶುಲ್ಕ ರೂ.15,000/– ಗಳನ್ನು ಹಾಗೂ ಅಧ್ಯಕ್ಷರು ಬಾಡಿಗೆ ಕಾರ್ ಉಪಯೋಗಿಸಿದ ಬಾಬ್ತು ರೂ.20,000/–ಗಳಿಗೆ ಮೀರದಂತೆ ನೀಡುವುದೆಂದು ಸಭೆಯು ಒಪ್ಪಿ ತೀರ್ಮಾನಿಸಲಾಯಿತು. ಇದಕ್ಕೆ ಶ್ರೀಮತಿ.ಎಂ.ಗೀತಾ ರವರು ಆಕ್ಷೇಪಣೆ ವ್ಯಕ್ತಪಡಿಸಿದರು.

**ವಿಷಯ:21(13):–** ಮಾನ್ಯ ಸ್ಥಾಯಿ ಸಮಿತಿ ಛೇರ್ಮನ್ ರವರಾದ ಶ್ರೀ.ಎಂ.ಬಿ.ಪಣೀಂದ್ರ ಕುಮಾರ್ ರವರಿಂದ ಬಂದಿರುವ ವಿಷಯ.

(1) ವಾರ್ಡ್ ನಂಬರ್ 33 ರಲ್ಲಿ ಈ ಹಿಂದೆ ಸೋಡಿಯಂ ದೀಪಗಳನ್ನು ಖರೀದಿಸಲು ಟೆಂಡರ್ ಮಂಜೂರಾಗಿದ್ದು ಸೋಡಿಯಂ ವೇಪರ್ ಬದಲು ಮೆಟಲ್ ಅಲಾಯ್ಡ್ ದೀಪಗಳನ್ನು ಖರೀದಿಸುವಂತೆ ಕೋರಿರುವ ವಿಚಾರ.

(2) ವಾರ್ಡ್ ನಂಬರ್ 33 ರಲ್ಲಿ 1.00ಲಕ್ಷ ರೂಪಾಯಿಗಳ ಕಾಮಗಾರಿಗೆ ಈಗಾಗಲೇ ಟೆಂಡರ್ ಕರೆದಿದ್ದು ಅದರ ಬದಲು ಬಾಕ್ಸ್ ಡ್ರೈನ್ ಕಾಮಗಾರಿ ಮಾಡಿಸುವಂತೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ**:21(13):– ವಿಷಯದಲ್ಲಿ ಕೋರಿರುವಂತೆ ಕ್ರಮ ಸಂಖ್ಯೆ (2)ನ್ನು ಕೈಬಿಡಲಾಯಿತು ಮತ್ತು ವಾರ್ಡ್ ನಂಬರ್:33ರಲ್ಲಿ ಸೋಡಿಯಂ ದೀಪಗಳನ್ನು ಖರೀದಿಸಲು ಈಗಾಗಲೇ ಕರೆದಿರುವ ಟೆಂಡರನ್ನು ರದ್ದುಪಡಿಸಿ, ಇಡೀ ವಾರ್ಡ್‌ನಲ್ಲಿ 1.00ಲಕ್ಷ ರೂಪಾಯಿಗಳಿಗಾಗಿ ಮೆಟಲ್ ಹಲಾಯ್ಡ್ ದೀಪಗಳನ್ನು ಖರೀದಿಸಲು ದಿನಾಂಕ: 8–5–2006ರ ಸಭೆಯಲ್ಲಿ ಟೆಂಡರ್ ದರ ಒಪ್ಪಿ ಮಂಜೂರಾಗಿದ್ದು ಸೋಡಿಯಂ ದೀಪಗಳನ್ನು ಮತ್ತು ಮೆಟಲ್ ಹಲಾಯಿಡ್ ದೀಪಗಳಿಗಾಗಿ ಟೆಂಡರ್ ಕರೆದು ಒಬ್ಬರೆ ಗುತ್ತಿಗೆದಾರರಿಗೆ ಆಗಿರುವುದರಿಂದ 1.00ಲಕ್ಷ ರೂಪಾಯಿಗಳಿಗೆ ಖರೀದಿಸಲು ಮಂಜೂರಾಗಿರುವ ದರದಲ್ಲೇ 50,000/– ರೂ.ಗಳಿಗೆ ಸೋಡಿಯಂ ಬದಲು ಮೆಟಲ್ ಹಲಾಯ್ಡ್ ದೀಪಗಳನ್ನು ಖರೀದಿಸಲು ಒಪ್ಪಿ ಮಂಜೂರು ಮಾಡಲಾಯಿತು.

**ವಿಷಯ:21(14):–** ವಾರ್ಡ್ ನಂಬರ್ 26ರಲ್ಲಿ ಶ್ರೀ.ಜಬ್ಬಾರ್ ಷರೀಫ್‌ರವರ ನಿವೇಶನದಿಂದ ಶ್ರೀ.ಅಜೀಜ್ ಖಾನ್ ರವರ ಮನೆವರೆಗೆ ಒಳಚರಂಡಿ ವ್ಯವಸ್ಥೆಯನ್ನು ಸರಿಪಡಿಸಿಕೊಡುವಂತೆ ಸದಸ್ಯರಾದ ಶ್ರೀ.ಮುನಾವರ್ ಖಾನ್ ರವರಿಂದ ಬಂದಿರುವ ವಿಚಾರ.

**ತೀರ್ಮಾನ**:21(14):–ಮಾಡಿಸಬಹುದೆಂದು ತೀರ್ಮಾನಿಸಲಾಯಿತು. ಅಂದಾಜು ಮೊತ್ತ ರೂ.1,50,000/–.

**ವಿಷಯ:21(15):-** ಅಧ್ಯಕ್ಷರು, ಕನ್ನಡ ಸಾಹಿತ್ಯ ಸಮ್ಮೇಳನ, ಮಂಡ್ಯರವರು ಮನವಿ ಸಲ್ಲಿಸಿ 7ನೇ ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ಸ್ವಾಗತ ಸಮಿತಿ, ಮಂಡ್ಯರವರು ಸಹಾಯಧನ ಕೊಡಿಸಿಕೊಡಬೇಕೆಂದು ಕೋರಿರುವ ವಿಚಾರ.

**ತೀರ್ಮಾನ:21(15):-** ರೂ.10,000/-(ಹತ್ತು ಸಾವಿರ ರೂಪಾಯಿ)ಗಳನ್ನು ಪಾವತಿಸಬಹುದೆಂದು ತೀರ್ಮಾನಿಸಲಾಯಿತು.

**ವಿಷಯ:21(16):-** ಗಾಂಧಿನಗರ 1,2,ಮತ್ತು 3ನೇ ಕ್ರಾಸ್‌ನಲ್ಲಿ ಒಳಚರಂಡಿ ಅಳವಡಿಸಲು ಅಂದಾಜು ವೆಚ್ಚ 2.50ಲಕ್ಷ ರೂಪಾಯಿಗಳ ವೆಚ್ಚದ ಕಾಮಗಾರಿಯನ್ನು ಮಾಡಿಸಿಕೊಡುವಂತೆ ಕೋರಿರುವ ವಿಚಾರ.

**ತೀರ್ಮಾನ:21(16):-** ಅಂದಾಜು ತಯಾರಿಸಿ ಮುಂದಿನ ಸಭೆಗೆ ತರುವುದೆಂದು ತೀರ್ಮಾನಿಸಲಾಯಿತು.

**ವಿಷಯ: 21(17):-** ಮಾನ್ಯ ಸದಸ್ಯರುಗಳಾದ ಶ್ರೀಮತಿ.ಎಂ.ಗೀತಾರವರು, ಶ್ರೀ.ಸಂಜಯ್ಯರವರು, ಶ್ರೀ.ಎಂ.ಸಿ.ರಾಘವೇಂದ್ರರವರು , ಶ್ರೀ.ಬಿ.ಎಂ.ಬಾಷರವರು, ಶ್ರೀ.ಟಿ.ಶಂಕರ್ ರವರು, ಶ್ರೀ.ಮಹದೇವರವರು,ಶ್ರೀಮತಿ.ಲಕ್ಷಮ್ಮರವರು, ಶ್ರೀಮತಿ.ಈರಮ್ಮರವರು, ಶ್ರೀಮತಿ.ರತ್ನಮ್ಮರವರು , ಶ್ರೀಮತಿ.ಜೀನತ್ ಸಯೀದ್ ರವರು ಮತ್ತು ಶ್ರೀ. ಮುನಾವರ್ ಖಾನ್‌ರವರು ತಮ್ಮ ವಾರ್ಡ್‌ಗಳಲ್ಲಿ ಬೀದಿ ದೀಪಗಳ ಕೊರತೆ ಇರುವುದರಿಂದ ತುರ್ತಾಗಿ ಮೆಟಲ್ ಅಲಾಯ್ಡ್ ದೀಪಗಳನ್ನು ತುರ್ತಾಗಿ ಖರೀದಿಸಿ ಅಳವಡಿಸುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:21(17):-** ನಗರಸಭೆಯ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಮುಂದಿನ ಕ್ರಮ ಕೈಗೊಳ್ಳಲು ತೀರ್ಮಾನಿಸ ಲಾಯಿತು

**ವಿಷಯ:21(18):-** ದಿನಾಂಕ:7-6-2006ರ ವಿಷಯ 5(ಬಿ) ರಲ್ಲಿ ತೀರ್ಮಾನವಾಗಿರುವಂತೆ ವಾರ್ಡ್‌ವಾರು ತಲಾ 3.00ಲಕ್ಷ ರೂ.ಗಳ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಲು ತೀರ್ಮಾನಿಸಿರುವ ಬಗ್ಗೆ .

**ತೀರ್ಮಾನ:21(18):-** ವಿಷಯ 5(ಬಿ)ರಲ್ಲಿ 12ನೇ ಹಣಕಾಸು ಯೋಜನೆಯಡಿಯಲ್ಲಿ ಬಿಡುಗಡೆಯಾಗಿರುವ ಹಣದಲ್ಲಿ ವಾರ್ಡ್‌ವಾರು ತಲಾ 3.00ಲಕ್ಷ ರೂ.ಗಳಂತೆ ಕಾಮಗಾರಿಗಳಿಗೆ ಬಳಸಿಕೊಳ್ಳಲು ತೀರ್ಮಾನಿಸಲಾಗಿತ್ತು. ಅದರಂತೆ ಮಂಡ್ಯ ಜಿಲ್ಲಾಧಿಕಾರಿಗಳಿಗೆ ಕಾಮಗಾರಿಗಳ ಪ್ರಸ್ತಾವನೆ ಸಲ್ಲಿಸಲಾಗಿ ಜಿಲ್ಲಾಧಿಕಾರಿಗಳವರ ಕಛೇರಿಯಿಂದ ಮೇಲ್ಕಂಡ ಯೋಜನೆಯಲ್ಲಿ ಹಣ ಬಿಡುಗಡೆಯಾಗಿಲ್ಲದ ಕಾರಣ ಪ್ರಸ್ತಾವನೆಯನ್ನು ವಾಪಸ್ ನಗರಸಭೆಗೆ ಕಳುಹಿಸಿರುತ್ತಾರೆ. ಆದ್ದರಿಂದ ಇತ್ತೀಚೆಗೆ ಸರ್ಕಾರದಿಂದ ಬಿಡುಗಡೆಯಾಗಿರುವ ಎಸ್.ಎಫ್.ಸಿ.ಅನುದಾನ ಕ್ರಮವಾಗಿ

| | |
|---|---|
| ನಇ/28/ಎಸ್‌ಎಫ್‌ಸಿ/2006 ದಿನಾಂಕ:17-6-2006ರಂತೆ | ರೂ.44,33,000/- |
| ನಇ/28/ಎಸ್‌ಎಫ್‌ಸಿ/2006 ದಿನಾಂಕ:3-7-2006ರಂತೆ | ರೂ.22,17,000/- |
| 12ನೇ ಹಣಕಾಸು ಮೊತ್ತ | ರೂ.13,34,000/- |
| ಒಟ್ಟು | ರೂ.79,84,000/- |

ರಂತೆ ಬಿಡುಗಡೆಯಾಗಿರುತ್ತದೆ ಮತ್ತು ಪೌರಾಡಳಿತ ನಿರ್ದೇಶನಾಲಯದ ಪತ್ರ ಸಂಖ್ಯೆ:ಸಿಆರ್/208/2005-06 ದಿನಾಂಕ: 11-5-2006 ರಂತೆ ಎಸ್.ಎಫ್.ಸಿ. ಅನುದಾನದಡಿಯಲ್ಲಿ ರೂ.1,34,46,000/- ಗಳು ಬಿಡುಗಡೆಯಾಗಿದ್ದು ಸದರಿ ಮೊತ್ತಕ್ಕೆ ದಿನಾಂಕ7-6-2006ರ ವಿಷಯ 5 ರಂತೆ 105ಲಕ್ಷ ರೂ.ಗಳನ್ನು ತಲಾ 3ಲಕ್ಷಗಳಂತೆ 35 ವಾರ್ಡ್‌ಗಳಿಗೂ ಕಾಮಗಾರಿ ನಿರ್ವಹಿಸಲು ಹಂಚಿಕೆ ಮಾಡಿರುತ್ತೆ. ಇನ್ನು ಉಳಿಕೆ ಮೊತ್ತ 29,46,000/- ರೂ.ಗಳನ್ನು ವಿವಿಧ ಬಾಬುಗಳಾದ ವಿದ್ಯುತ್ ಬಿಲ್ಲು , ನೌಕರರುಗಳ ವೇತನ , ಸಾಲ ಮರುಪಾವತಿ ಬಗ್ಗೆ ಭರಿಸಲು ತೀರ್ಮಾನವಾಗಿರುತ್ತೆ.

ಸದರಿ ತೀರ್ಮಾನವನ್ನು ಮಾರ್ಪಡಿಸಿ ಸಾಲ ಮರುಪಾವತಿಯಡಿಯಲ್ಲಿ ಕೊರತೆಯಾಗಿರುವ ವೆಚ್ಚವನ್ನು ಮಾತ್ರ ಭರಿಸಲು ಒಪ್ಪಿ ಕೊರತೆಯಾಗಿರುವ ಸಿಬ್ಬಂದಿಗಳ ರಜೆ ವೇತನ ಪಾವತಿಗಾಗಿ ಕಾಯ್ದಿರಿಸಿದ ಮೊತ್ತ ರೂ.10ಲಕ್ಷ ಹಾಗೂ ವಿದ್ಯುತ್ ಬಿಲ್ಲು ಹಾಗೂ ಇತರೆ ಕಾಮಗಾರಿ ಬಿಲ್ಲಿನ ವೆಚ್ಚಕ್ಕಾಗಿ ಕಾಯ್ದಿರಿಸಿದರ ಮೊತ್ತ ರೂ.9.46ಲಕ್ಷಗಳನ್ನು ಸದರಿ ಬಾಬುಗಳಲ್ಲಿ ಹಣದ ಕೊರತೆ ಇಲ್ಲದಿರುವುದರಿಂದ ಕೈಬಿಡಬಹುದೆಂದು ತೀರ್ಮಾನಿಸಿ ಈ ಮೊತ್ತವನ್ನು 3ಲಕ್ಷ ರೂ.ಗಳ ಕಾಮಗಾರಿಗಳಿಗೆ ವಾರ್ಡ್‌ವಾರಿನಂತೆ ಬಳಸಿಕೊಳ್ಳಲು ತೀರ್ಮಾನಿಸಲಾಯಿತು.

| | |
|---|---|
| ಎಸ್.ಎಫ್.ಸಿ.ಅನುದಾನದಡಿಯಲ್ಲಿ ಬಿಡುಗಡೆಯಾದ ಮೊತ್ತ | ರೂ.79,84,000/- |
| | ರೂ.19,46,000/- |
| ಒಟ್ಟು | ರೂ.99,30,000/- |
| 35 ವಾರ್ಡ್‌ಗಳಿಗೆ ತಲಾ 3.00ಲಕ್ಷ ರೂ.ಗಳ ರೀತ್ಯಾ | ರೂ.105.00 ಲಕ್ಷ ಗಳಾಗುತ್ತದೆ. |
| ನಗರಸಬೆಗೆ ವಿವಿಧ ಯೋಜನೆಯಡಿಯಲ್ಲಿ ಬಿಡುಗಡೆಯಾಗಿರುವುದು | -ರೂ. 99.30 ಲಕ್ಷ |
| | ರೂ. 5.70 ಲಕ್ಷ. |

ಕೊರತೆ ಇರುವ ಮೊತ್ತ ರೂ. 5.70 ಲಕ್ಷಗಳನ್ನು ನಗರಸಭೆ ನಿಧಿಯಿಂದ ಭರಿಸಬಹುದೆಂದು ತೀರ್ಮಾನಿಸಲಾಯಿತು ಹಾಗೂ ಕಾಮಗಾರಿಗಳನ್ನು ಸಹ ಮಂಜೂರ್ಮಾಡಲಾಯಿತು. ಟೆಂಡರ್ ಕರೆಯಲು ಒಪ್ಪಲಾಯಿತು.

**ವಿಷಯ:21(19):-** ವಾರ್ಡ್ ನಂಬರ್:22 ಶ್ರೀ.ಹೆಚ್.ಕೆ.ರುದ್ರಪ್ಪರವರಿಂದ ಬಂದಿರುವ ವಿಷಯ.
ಹಾಲಹಳ್ಳಿ ಕೆರೆಯಲ್ಲಿ 1 ಮತ್ತು 2ನೇ ಕ್ರಾಸ್ ರಸ್ತೆಯಲ್ಲಿ ಚಪ್ಪಡಿ ತೆಗೆದು 4 (ನಾಲ್ಕು) ಡೆಕ್ ಗಳನ್ನು ನಿರ್ಮಾಣ ಮಾಡಿಸುವ ಅಂದಾಜು ವೆಚ್ಚ 75,000/-ರೂ.ಗಳಿಗೆ ಒಪ್ಪಿಗೆ ನೀಡುವ ವಿಚಾರ.

**ತೀರ್ಮಾನ**:21(19):ಈಗಾಗಲೇ ಎಲ್ಲಾ ವಾರ್ಡ್‌ಗಳಿಗೆ ಸಮನಾಗಿ ಹಂಚಿಕೆ ಮಾಡಿರುವ ಅನುದಾನದ ಮೊತ್ತದಲ್ಲಿ ಸಂಬಂಧಪಟ್ಟ ಸದಸ್ಯರುಗಳು ಕಾಮಗಾರಿಗಳನ್ನು ಮಾಡಿಸಲು ತೀರ್ಮಾನಿಸಲಾಯಿತು.

**ವಿಷಯ:21(20):-** ಸದಸ್ಯರಾದ ಶ್ರೀ.ಎಂ.ಸಿ.ರಾಘವೇಂದ್ರರವರು ವಾರ್ಡ್ ನಂಬರ್ 20ರಲ್ಲಿ ಶ್ರೀನಾಥ್ ರವರ ಮನೆಯಿಂದ ಹಾಲಹಳ್ಳಿ ರಸ್ತೆವರೆಗೆ ಶ್ರೀರಾಮ ಮಂದಿರದ ಉತ್ಸವದ ತೇರು ಬರುವುದರಿಂದ ಸದರಿ ರಸ್ತೆಯನ್ನು ಅಭಿವೃದ್ಧಿಪಡಿಸಲು ಅಂದಾಜು ವೆಚ್ಚ ರೂ.1,75,000/- ರೂಪಾಯಿಗಳ ಕಾಮಗಾರಿಯನ್ನು ನಿರ್ವಹಿಸಲು ಕೋರಿರುವ ಬಗ್ಗೆ ಒಪ್ಪಿಗೆ ನೀಡುವ ವಿಚಾರ.

**ತೀರ್ಮಾನ:21(20):-** ಈಗಾಗಲೇ ಎಲ್ಲಾ ವಾರ್ಡ್‌ಗಳಿಗೆ ಸಮನಾಗಿ ಹಂಚಿಕೆ ಮಾಡಿರುವ ಅನುದಾನದ ಮೊತ್ತದಲ್ಲಿ ಸಂಬಂಧಪಟ್ಟ ಸದಸ್ಯರುಗಳು ಕಾಮಗಾರಿಗಳನ್ನು ಮಾಡಿಸಲು ತೀರ್ಮಾನಿಸಲಾಯಿತು.

**ವಿಷಯ:21(21):-** ವಾರ್ಡ್ ನಂಬರ್ 1ರ ವಿಶೇಷ ಸಭೆ ದಿನಾಂಕ:8-5-2006ರ ವಿಷಯ 2 ರಲ್ಲಿ ಕ್ರಮ ಸಂಖ್ಯೆ(2) ಮೂರನೇ ಅಡ್ಡ ರಸ್ತೆ ಮರಿಯಪ್ಪ ಸೈಕಲ್ ಷಾಪ್ ನಿಂದ ಜೈನರ ಬೀದಿ ಬಾಬು ಸೇಲ್ಸ್ ಅಂಗಡಿವರೆಗೆ ಹಳೇ ರೈಲ್ವೆ ಸ್ಟೇಷನ್ ರಸ್ತೆ ಅಭಿವೃದ್ಧಿ ಮತ್ತು ಧರಣಪ್ಪ ಬಿಲ್ಡಿಂಗ್ ಸೇಟು ದೇವಸ್ಥಾನದವರೆಗೆ ಹಾಗೂ ಸಿಮ್ಲಾ ಹೋಟೆಲ್ ಗಲ್ಲಿ ಡೋಬಿ ನಾರಾಯಣಪ್ಪನ ಮನೆವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಗುತ್ತಿಗೆದಾರರಾದ ಶ್ರೀ.ಜವರೇಗೌಡರವರು ಇದುವರೆಗೂ ಪ್ರಾರಂಭಿಸಿರುವುದಿಲ್ಲವಾದ ಕಾರಣ ಟೆಂಡರ್ ಪಡೆದು ಮುಚ್ಚಳಿಕೆ ಪತ್ರ ನೀಡದೇ ಇರುವುದರಿಂದ ಕಛೇರಿಯಿಂದ ಕೆಲಸದ ಆದೇಶ ಪಡೆಯದೆ ಇರುವುದರಿಂದ ಸಾರ್ವಜನಿಕ ಹಿತದೃಷ್ಟಿಯಿಂದ ಇದುವರೆವಿಗೂ ಕಾಮಗಾರಿ ಪ್ರಾರಂಭಿಸಿಲ್ಲವಾದ್ದರಿಂದ ಸದರಿಯವರ ವಿರುದ್ಧ ವಾರ್ಡ್ ಸದಸ್ಯರಾದ ಶ್ರೀ.ಮಹದೇವು (ಕಿಟ್ಟಿ)ರವರು ಮನವಿ ಪತ್ರ ನೀಡಿರುವುದರಿಂದ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.
**ತೀರ್ಮಾನ:21(21):-** ಇ.ಎಂ.ಡಿ.ಮುಟ್ಟುಗೋಲು ಹಾಕಿಕೊಂಡು ಮರು ಟೆಂಡರ್ ಕರೆಯುವಂತೆ ತೀರ್ಮಾನಿಸಲಾಯಿತು.

ಸಹಿ:
(ಸಿ.ವಿಜಯಲಕ್ಷ್ಮಿ)
ಅಧ್ಯಕ್ಷರು,
ನಗರಸಭೆ, ಮಂಡ್ಯ.

"ನಕಲು"
ಸಹಿ:
ಪೌರಾಯುಕ್ತರು,
ನಗರಸಭೆ, ಮಂಡ್ಯ.